# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ದಕ್ಷಿಣ ಭಾರತ್ ಹಿಂದಿ ಪ್ರಚಾರ ಸಭಾ, ಡಾ: ಬಿ.ಡಿ.ಜತ್ತಿ ಹೋಮಿಯೋಪಥಿಕ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಧಾರವಾಡ ಇವರಿಗೆ 2003-2004ನೇ ಶೈಕ್ಷಣಿಕ ಸಾಲಿನಿಂದ ಬಿ.ಹೆಚ್.ಎಂ.ಎಸ್.ಕೋರ್ಸಿನ ಪ್ರವೇಶ ಮಿತಿಯನ್ನು 75 ರಿಂದ 100 ಕ್ಕೆ ( 25 ಸೀಟುಗಳು) ಹೆಚ್ಚಿಸಲು ಅನುಮತಿ ನೀಡುವ ಬಗ್ಗೆ.

ಓದಲಾಗಿದೆ: ೧) ನಿರ್ದೇಶಕರು, ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಇಲಾಖೆ ಬೆಂಗಳೂರು, ಇವರ ಪತ್ರ ಸಂಖ್ಯೆ: ಭಾವೈಪ : 51: ನಿಅವಿ (೨):2003-2004, ದಿನಾಂಕ: 9.1.2004.

೨) ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ: ACA-HY-4/0-13/2003-2004. ದಿನಾಂಕ: 20.1.2004.

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ಪತ್ರದಲ್ಲಿ ನಿರ್ದೇಶಕರು, ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಇಲಾಖೆ, ಬೆಂಗಳೂರು, ಇವರು ದಿನಾಂಕ: 3.1.2004 ರಂದು ಧಾರವಾಡದಲ್ಲಿರುವ ಡಾ: ಬಿ.ಡಿ.ಜತ್ತಿ ಹೋಮಿಯೋಪತಿಕ್ ವೈದ್ಯಕೀಯ ಮಹಾವಿದ್ಯಾಲಯಕ್ಕೆ ಭೇಟಿ ನೀಡಿ ಪರಿಶೀಲಿಸಿ ನೀಡಿರುವ ವರದಿಯಲ್ಲಿ ಸದರಿ ಸಂಸ್ಥೆಗೆ ಬಿ.ಹೆಚ್.ಎಂ.ಎಸ್. ಪದವಿ ಕೋರ್ಸಿನ ಪ್ರವೇಶ ಮಿತಿಯನ್ನು 75 ರಿಂದ 100ಕ್ಕೆ ಹೆಚ್ಚಿಸಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ (2) ರಲ್ಲಿ ಓದಲಾದ ಪತ್ರದಲ್ಲಿ ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಇವರು ದಕ್ಷಿಣ ಭಾರತ್ ಹಿಂದಿ ಪ್ರಚಾರ ಸಭಾ, ಡಾ: ಬಿ.ಡಿ.ಜತ್ತಿ ಹೋಮಿಯೋಪಥಿಕ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಧಾರವಾಡ ಇವರಿಗೆ 2003-2004ನೇ ಶೈಕ್ಷಣಿಕ ಸಾಲಿನಿಂದ ಬಿ.ಹೆಚ್.ಎಂ.ಎಸ್. ಕೋರ್ಸಿನ ಪ್ರವೇಶ ಮಿತಿಯನ್ನು 75 ರಿಂದ 100ಕ್ಕೆ (25 ಸೀಟುಗಳು) ಹೆಚ್ಚಿಸಲು ವಿಶ್ವವಿದ್ಯಾಲಯದ ಸಿಂಡಿಕೇಟ್ ಶಿಫಾರಸ್ಸು ಮಾಡಿರುತ್ತದೆ.

ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿದೆ. ಆದರಂತೆ ಈ ಆದೇಶ.

## ಸರ್ಕಾರದ ಆದೇಶ ಸಂಖ್ಯೆ ಆಕುಕ 99 ಪಿಟಿಡಿ 2004, ಬೆಂಗಳೂರು, ದಿನಾಂಕ: 20-2-2004

1994 ನೇ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿ ನಿಯಮದ 45 (10) (ಬಿ) ಪ್ರಕರಣದಡಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ದಕ್ಷಿಣ ಭಾರತ್ ಹಿಂದಿ ಪ್ರಚಾರ ಸಭಾ, ಡಾ: ಬಿ.ಡಿ.ಜತ್ತಿ ಹೋಮಿಯೋಪಥಿಕ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಧಾರವಾಡ ಇವರಿಗೆ 2003-2004ನೇ ಶೈಕ್ಷಣಿಕ ಸಾಲಿನಿಂದ ಬಿ.ಹೆಚ್.ಎಂ.ಎಸ್.ಕೋರ್ಸಿನ ಪ್ರವೇಶ ಮಿತಿಯನ್ನು 75 ರಿಂದ 100 ಕ್ಕೆ ( 25 ಸೀಟುಗಳು) ಹೆಚ್ಚಿಸಲು ಈ ಕೆಳಕಂಡ ಷರತ್ತುಗಳನ್ನು ಪೂರೈಸುವ ನಿಬಂಧನೆಗೊಳಪಟ್ಟು, ಸಂಯೋಜನೆ ನೀಡಲು ಶಿಫಾರಸ್ಸು ಮಾಡಿದೆ.

೧)ಕೇಂದ್ರೀಯ ಹೋಮಿಯೋಪತಿ ಪರಿಷತ್ತು , ನವದೆಹಲಿ ಇವರ ಅನುಮೋದನೆ ಪಡೆಯತಕ್ಕದ್ದು.

೨)ಕೇಂದ್ರೀಯ ಹೋಮಿಯೋಪತಿ ಪರಿಷತ್ತು ನವರು ನಿಗದಿಪಡಿಸಿರುವ ಶಿಕ್ಷಣದ ಗುಣಮಟ್ಟವನ್ನು ನಿರ್ವಹಿಸತಕ್ಕದ್ದು ಹಾಗೂ ನಿಗದಿಪಡಿಸಿದ ಸೌಲಭ್ಯಗಳನ್ನು ಒದಗಿಸುವುದು.

PRINCIPAL
Dakshin Bharat Hindi Prachar Sabha's
Dr. B.D. Jatti Homoeopathic
Medical College & Hospital
DHARWAD

1-3-04

೩)ಈ ಸಂಸ್ಥೆಯು ಸಂಬಂಧಪಟ್ಟ ರಾಜ್ಯ ಸರ್ಕಾರದ ಸಕ್ಷಮ ಪ್ರಾಧಿಕಾರದ ಮುಖಾಂತರ ಕೇಂದ್ರೀಯ ಪರಿಷತ್ತಿನೊಂದಿಗೆ ಪತ್ರ ವ್ಯವಹರಿಸತಕ್ಕದ್ದು.

೪)ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ವಿಧಿಸಿರುವ ಷರತ್ತುಗಳನ್ನು ಪೂರೈಸತಕ್ಕದ್ದು.

೫)ಸದರಿ ಕೋರ್ಸ್‌ಗೆ ಹಾಗೂ ಕಾಲೇಜಿಗೆ ಸಂಬಂಧಿಸಿದಂತೆ ಸರ್ಕಾರದ ಯಾವುದೇ ಅನುದಾನ ಹಾಗೂ ಸೌಲಭ್ಯ ನೀಡಲಾಗುವುದಿಲ್ಲ.

೬) ಕೇಂದ್ರ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ, ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಇಲಾಖೆ ಇವರ ಅನುಮತಿ ಪಡೆಯತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟೋಮಸ್ ನಾಯರ್.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ಇವರಿಗೆ:

೧) ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು.
೨) ನಿರ್ದೇಶಕರು, ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಇಲಾಖೆ, ಬೆಂಗಳೂರು.
೩) ಪ್ರಾಂಶುಪಾಲರು, ದಕ್ಷಿಣ ಭಾರತ್ ಹಿಂದಿ ಪ್ರಚಾರ ಸಭಾ, ಡಾ: ಬಿ.ಡಿ.ಜತ್ತಿ ಹೋಮಿಯೋಪಥಿಕ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಡಿ.ಸಿ.ಕಾಂಪೌಂಡ್, ಧಾರವಾಡ -೧.
೪) Secretary, Central Council of Homeopathy, Jawaharlal Nehru Bhartiya Chikitsa Ayum Homeopathy Anusandhan Bhavan, No.61-65, Institutional Area, Opp. D.Block, Janakpuri, New Delhi-110058.
೫) The Secretary, Government of India, Ministry of Health & Family Welfare, Department of Inidan System of Medicine & Homoeopathy, EP Cell, IRC Building, New Delhi-110001.
೬) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
೭) ಕಾರ್ಯದರ್ಶಿ(ವೈದ್ಯಕೀಯ ಶಿಕ್ಷಣ), ಉಪಕಾರ್ಯದರ್ಶಿ(ವೈದ್ಯಕೀಯ ಶಿಕ್ಷಣ), ಇವರ ಆಪ್ತ ಶಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
೮) ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಯವರಿಗೆ, ವಿಧಾನಸೌಧ, ಬೆಂಗಳೂರು.
೯) ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿಗಳು.

PRINCIPAL
Dakshin Bharat Hindi Prachar Sabha's
Dr. B.D. Jatti Homoeopathic
Medical College & Hospital
DHARWAD

INWARD NO. 76 DATE 22/9/01

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಡಾ:ಬಿ.ಡಿ.ಜತ್ತಿ ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಧಾರವಾಡ ಈ ಸಂಸ್ಥೆಯ ಎಂಡಿ ಹೋಮಿಯೋಪತಿ ರಿಪರ್ಟರಿ ಸ್ನಾತಕೋತ್ತರ ಕೋರ್ಸನ್ನು 2001-2002ನೇ ಶೈಕ್ಷಣಿಕ ಸಾಲಿಗೆ 3 ಸೀಟುಗಳೊಂದಿಗೆ ಪ್ರಾರಂಭಿಸಲು ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ: 1) ಕುಲಸಚಿವರು, ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಇವರ ಅಧಿಸೂಚನೆ ಸಂಖ್ಯೆ:ಎಸಿಎ:ಹೆಚ್‌ವೈ:4:0-13:2001-2002:65, ದಿನಾಂಕ:31-3-2001.

2) ನಿರ್ದೇಶಕರು, ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ:ಭಾವೈಪ:10:ಅಭಿವೃದ್ಧಿ(1):2001-2002:239, ದಿನಾಂಕ:22-6-2001.

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ಕುಲಸಚಿವರು, ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಇವರ ಪತ್ರ ದಿನಾಂಕ:31-3-2001 ರಲ್ಲಿ ಡಾ:ಬಿ.ಡಿ.ಜತ್ತಿ, ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಧಾರವಾಡ ಇವರಿಗೆ 2001-2002ನೇ ಶೈಕ್ಷಣಿಕ ಸಾಲಿಗೆ ಎಂಡಿ ಹೋಮಿಯೋಪತಿ ರಿಪರ್ಟರಿ ಸ್ನಾತಕೋತ್ತರ ಕೋರ್ಸನ್ನು (3 ಸೀಟುಗಳೊಂದಿಗೆ) ಸಿಂಡಿಕೇಟಿನ ನಿರ್ಣಯದಂತೆ, ಭಾರತೀಯ ಹೋಮಿಯೋಪತಿ ಪರಿಷತ್ತಿನ ಅನುಮೋದನೆ ಪಡೆಯುವ ಷರತ್ತಿಗೆ ಒಳಪಟ್ಟು ಪ್ರಾರಂಭಿಸಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ (2) ರಲ್ಲಿ ಓದಲಾದ ನಿರ್ದೇಶಕರು, ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಇಲಾಖೆ, ಬೆಂಗಳೂರು ಇವರ ಪತ್ರದಲ್ಲಿ ರಾಜೀವಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ, ಬೆಂಗಳೂರು ಇವರು ಸದರಿ ಸಂಸ್ಥೆಯಲ್ಲಿ ಸ್ನಾತಕೋತ್ತರ ಹೋಮಿಯೋಪತಿ ರಿಪರ್ಟರಿ ಕೋರ್ಸನ್ನು 3 ಸೀಟುಗಳೊಂದಿಗೆ ಪ್ರಾರಂಭಿಸಲು ಅನುಮತಿ ನೀಡಿರುವುದರಿಂದ ಡಾ:ಬಿ.ಡಿ.ಜತ್ತಿ ಹೋಮಿಯೋಪತಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಧಾರವಾಡ ಇವರಿಗೆ ಮಂಜೂರಾತಿ ನೀಡಬಹುದಾಗಿದೆ ಎಂದು ಶಿಫಾರಸ್ಸು ಮಾಡಿರುತ್ತಾರೆ.

ಈ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ:ಆಕುಕ 291 ಪಿಐಎಂ 2001, ಬೆಂಗಳೂರು, ದಿನಾಂಕ:12-9-2001.

ಮೇಲೆ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಡಾ:ಬಿ.ಡಿ.ಜತ್ತಿ, ಹೋಮಿಯೋಪತಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಧಾರವಾಡ ಈ ಸಂಸ್ಥೆಗೆ 2001-2002ನೇ ಸಾಲಿನಿಂದ ಹೊಸದಾಗಿ ಎಂ.ಡಿ.ಹೋಮಿಯೋಪತಿ ರಿಪರ್ಟರಿ ಕೋರ್ಸನ್ನು 3(ಮೂರು) ಸೀಟುಗಳೊಂದಿಗೆ ಪ್ರಾರಂಭಿಸಲು ಕೆಳಕಂಡ ಷರತ್ತುಗಳನ್ನು ಪೂರೈಸುವ ನಿಬಂಧನೆಗೊಳಪಟ್ಟು ಮಂಜೂರಾತಿ ನೀಡಲಾಗಿದೆ.

1) ಕೋರ್ಸನ್ನು ಪ್ರಾರಂಭಿಸುವ ಮುನ್ನ ಸೆಂಟ್ರಲ್ ಕೌನ್ಸಿಲ್ ಆಫ್ ಹೋಮಿಯೋಪತಿ, ನವದೆಹಲಿ ಇವರ ಅನುಮತಿಯನ್ನು ಪಡೆಯತಕ್ಕದ್ದು ಮತ್ತು ಷರತ್ತುಗಳನ್ನು ಪೂರೈಸುವ ನಿಬಂಧನೆಗೊಳಪಟ್ಟಿರುತ್ತದೆ.

One copy to PG file
24/9

---2

PRINCIPAL
Dakshin Bharat Hindi Prachar Sabha's
Dr. B.D. Jatti Homoeopathic
Medical College & Hospital
DHARWAD

2) ಸರ್ಕಾರ ಹಾಗೂ ರಾಜೀವಗಾಂಧಿ ಆರೋಗ್ಯ ವಿಶ್ವ-ವಿದ್ಯಾಲಯ, ಬೆಂಗಳೂರು ಇವರು ನಿಗದಿಪಡಿಸುವ ಎಲ್ಲಾ ಷರತ್ತುಗಳನ್ನು ಪಾಲಿಸತಕ್ಕದ್ದು.

3) ಸರ್ಕಾರದಿಂದ ಯಾವುದೇ ಅನುದಾನ ಅಥವಾ ಸೌಲಭ್ಯ ನೀಡಲು ಅವಕಾಶ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಜಿ. ಶ್ರೀನಿವಾಸನ್) 11/4/2001
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ಇವರಿಗೆ :-

1) ಕುಲಸಚಿವರು, ರಾಜೀವಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ, ಬೆಂಗಳೂರು.
2) ನಿರ್ದೇಶಕರು, ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಇಲಾಖೆ, ಬೆಂಗಳೂರು.
3) ಸಚಿವ ಸಂಪುಟ ಶಾಖೆ(ವಿಷಯ ಸಂಖ್ಯೆ.325:2001).
4) ಮಾನ್ಯ ಉನ್ನತ ಶಿಕ್ಷಣ ಹಾಗೂ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿ-ಯವರಿಗೆ. ವಿಧಾನಸೌಧ, ಬೆಂಗಳೂರು.
5) ಕಾರ್ಯದರ್ಶಿ, (ವೈದ್ಯಕೀಯ ಶಿಕ್ಷಣ) ಉಪಕಾರ್ಯದರ್ಶಿ(ವೈದ್ಯಕೀಯ ಶಿಕ್ಷಣ) ಆಪ್ತ ಸಹಾಯಕರಿಗೆ.
6) ಕಾರ್ಯದರ್ಶಿ, ಸೆಂಟ್ರಲ್ ಕೌನ್ಸಿಲ್ ಆಫ್ ಹೋಮಿಯೋಪತಿ, ಜವಾಹರಲಾಲ್ ನೆಹರು, ಭಾರತೀಯ ಕೇಂದ್ರೀಯ ಹೋಮಿಯೋಪತಿ ಅನುಸಂಧಾನ ಭವನ, ನಂ.61-65, ನವದೆಹಲಿ 5 ಮತ್ತು 6ನೇ ಪಂತ, 'ಡಿ' ಬ್ಲಾಕ್ ಎದುರು ಇನ್ಸ್ಟಿಟ್ಯೂಷನಲ್ ಏರಿಯಾ, ಜಾನಕಿಪುರಿ
7) ಪ್ರಾಂಶುಪಾಲರು, ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ ಡಾ: ಬಿ.ಡಿ. ಜತ್ತಿ ಹೋಮಿಯೋಪತಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಡಿ.ಸಿ. ಕಾಂಪೌಂಡ್, ಧಾರವಾಡ-1.
8) ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿಗಳು.

PRINCIPAL
Dakshin Bharat Hindi Prachar Sabha's
Dr. B.D. Jatti Homoeopathic
Medical College & Hospital
DHARWAD

INWARD NO 359 DATE 16-9-2002

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ ಡಾ:ಬಿ.ಡಿ.ಜತ್ತಿ ಹೋಮಿಯೋಪತಿ ವೈದ್ಯಕೀಯ ಕಾಲೇಜು, ಧಾರವಾಡ ಇವರಿಗೆ 2002–2003ನೇ ಸಾಲಿಗೆ ಹೊಸದಾಗಿ ಹೆಚ್ಚುವರಿ ಕೋರ್ಸುಗಳಾದ ಎಂ.ಡಿ. (ಹೋಮಿಯೋಪತಿ)ನಲ್ಲಿ 1) ಮೆಟೀರಿಯಾ ಮೆಡಿಕಾ–5 ಸೀಟುಗಳಿಗೆ ಹಾಗೂ 2) ಆರ್ಗನಾನ್ ಅಂಡ ಫಿಲಾಸಫಿ–3 ಸೀಟುಗಳೊಂದಿಗೆ ಪ್ರಾರಂಭಿಸಲು ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ: 1) ಕುಲಸಚಿವರು ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಬೆಂಗಳೂರು ಇವರ ಪತ್ರ ಸಂಖ್ಯೆ: ಎಸಿಎ:ಹೆಚ್‌ವೈ–4:ಓ–13:2002–2003, ದಿನಾಂಕ: 16–2–2002.

2) ಪ್ರಾಂಶುಪಾಲರು ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ ಡಾ:ಬಿ.ಡಿ.ಜತ್ತಿ ಹೋಮಿಯೋಪತಿಕ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಧಾರವಾಡ ಇವರ ಪತ್ರ ಸಂಖ್ಯೆ:ಬಿ.ಡಿ.ಜೆ:ಹೆಚ್‌ಎಂಸಿ:ಬಿಹೆಚ್‌ಎಂಎಸ:ಎಂಡಿ:2002–2003:403, ದಿನಾಂಕ:20–4–2002.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ:(1)ರ ಪತ್ರದಲ್ಲಿ ಕುಲಸಚಿವರು, ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಇವರು ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ ಡಾ:ಬಿ.ಡಿ.ಜತ್ತಿ ಹೋಮಿಯೋಪತಿಕ ಮೆಡಿಕಲ್ ಕಾಲೇಜ ಮತ್ತು ಆಸ್ಪತ್ರೆ, ಧಾರವಾಡ ಇವರಿಗೆ 2002–2003ನೇ ಶೈಕ್ಷಣಿಕ ಸಾಲಿಗೆ ಹೊಸದಾಗಿ ಹೆಚ್ಚುವರಿ ಕೋರ್ಸುಗಳಾದ ಎಂ.ಡಿ.(ಹೋಮಿಯೋಪತಿ) 1)ಮೆಟೀರಿಯಾ ಮೆಡಿಕಾ–5 ಸೀಟುಗಳಿಗೆ ಹಾಗೂ ಆರ್ಗನಾನ ಅಂಡ ಫಿಲಾಸಫಿ–3 ಸೀಟುಗಳೊಂದಿಗೆ ಪ್ರಾರಂಭಿಸಲು ಸಿಂಡಿಕೇಟ ನಿರ್ಣಯದಂತೆ ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ:(2)ರಲ್ಲಿ ಪ್ರಾಂಶುಪಾಲರು, ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ ಡಾ:ಬಿ.ಡಿ.ಜತ್ತಿ ಹೋಮಿಯೋಪತಿಕ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಧಾರವಾಡ ಇವರು ತಮ್ಮ ಪತ್ರದಲ್ಲಿ ಕುಲಸಚಿವರು, ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಇವರ ಶಿಫಾರಸ್ಸಿನಂತೆ, ಕಾರ್ಯದರ್ಶಿಗಳು ಕೇಂದ್ರೀಯ ಹೋಮಿಯೋಪತಿ ಪರಿಷತ್, ನವದೆಹಲಿ ಇವರಿಗೆ ಅನುಮತಿ ನೀಡಲು ಪತ್ರ ವ್ಯವಹರಿಸಿರುವ ಬಗ್ಗೆ ಮಾಹಿತಿ ನೀಡಿರುತ್ತಾರೆ.

ಈ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ:ಆಕುಕ 171 ಪಿಐಎಂ 2002, ಬೆಂಗಳೂರು, ದಿನಾಂಕ:2–9–2002.

ಮೇಲೆ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆ ಡಾ:ಬಿ.ಡಿ.ಜತ್ತಿ ಹೋಮಿಯೋಪತಿಕ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಧಾರವಾಡ ಇವರಿಗೆ 2002–2003ನೇ ಶೈಕ್ಷಣಿಕ ಸಾಲಿಗೆ ಹೊಸದಾಗಿ ಹೆಚ್ಚುವರಿ ಕೋರ್ಸುಗಳಾದ ಎಂ.ಡಿ.(ಹೋಮಿಯೋಪತಿ) ಯಲ್ಲಿ 1)ಮೆಟೀರಿಯಾ ಮೆಡಿಕಾ–5 ಸೀಟುಗಳು (ಐದು). (2)ಎಂ.ಡಿ(ಹೋಮಿಯೋಪತಿ) ಆರ್ಗನಾನ ಮತ್ತು ಫಿಲಾಸಫಿ–3 ಸೀಟುಗಳೊಂದಿಗೆ (ಮೂರು) ಪ್ರಾರಂಭಿಸಲು ಕೇಂದ್ರೀಯ ಹೋಮಿಯೋಪತಿ ಪರಿಷತ್, ನವದೆಹಲಿ ಇವರ ಅನುಮೋದನೆ ಪಡೆಯುವ ಷರತ್ತಿಗೊಳಪಟ್ಟು ಹಾಗೂ ಈ ಕೆಳಕಂಡ ಷರತ್ತುಗಳನ್ನು ನಿಬಂಧನೆಗಳಿಗೊಳಪಟ್ಟು ಮಂಜೂರಾತಿ ನೀಡಲಾಗಿದೆ.

1) ಕೇಂದ್ರೀಯ ಹೋಮಿಯೋಪತಿ ಪರಿಷತ್ತು, ನವದೆಹಲಿ ಇವರು ನಿಗದಿಪಡಿಸಿರುವ ಷರತ್ತುಗಳನ್ನು ಪೂರೈಸುವ ನಿಬಂಧನೆಗಳಿಗೊಳಪಟ್ಟಿರುತ್ತದೆ.

Submitted to working President.
Through convener and secretary
16-9-02

---2

PRINCIPAL
Dakshin Bharat Hindi Prachar Sabha's
Dr. B.D. Jatti Homoeopathic
Medical College & Hospital
DHARWAD

2) ಈ ಸಂಸ್ಥೆಯು ರಾಜ್ಯ ಸರ್ಕಾರದ ಸಕ್ಷಮ ಪ್ರಾಧಿಕಾರದ ಮುಖಾಂತರ ಕೇಂದ್ರೀಯ ಪರಿಷತ್ತಿನೊಂದಿಗೆ ಪತ್ರ ವ್ಯವಹಾರ ನಡೆಸತಕ್ಕದ್ದು.

3) ಕೇಂದ್ರೀಯ ಹೋಮಿಯೋಪತಿ ಪರಿಷತ್ತು ನವರು ನಿಗದಿಪಡಿಸಿರುವ ಶಿಕ್ಷಣ ಗುಣಮಟ್ಟವನ್ನು ನಿರ್ವಹಿಸತಕ್ಕದ್ದು ಹಾಗೂ ನಿಗದಿಪಡಿಸಿದ ಸೌಲಭ್ಯಗಳನ್ನು ಒದಗಿಸುವುದು.

4) ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ವಿಧಿಸಿದ ಷರತ್ತುಗಳನ್ನು ಪೂರೈಸತಕ್ಕದ್ದು.

5) ಸದರಿ ಕೋರ್ಸಿಗೆ ಸಂಬಂಧಿಸಿದಂತೆ, ಕಾಲೇಜುಗಳಿಗೆ ರಾಜ್ಯ ಸರ್ಕಾರದಿಂದ ಯಾವುದೇ ಅನುದಾನ ಹಾಗೂ ಸೌಲಭ್ಯ ನೀಡಲಾಗುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ನಂಜುಂಡ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ಇವರಿಗೆ:-

1) ಕುಲಸಚಿವರು, ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು.
2) ನಿರ್ದೇಶಕರು, ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಇಲಾಖೆ. ಬೆಂಗಳೂರು
3) ಸಚಿವ ಸಂಪುಟದ ಶಾಖೆ (ವಿಷಯ ಸಂಖ್ಯೆ:ಸಿ.350:2002) ದಿನಾಂಕ:13-8-2002.
4) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ, ವಿಧಾನಸೌಧ, ಬೆಂಗಳೂರು.
5) ಕಾರ್ಯದರ್ಶಿ (ವೈದ್ಯಕೀಯ ಶಿಕ್ಷಣ), ಉಪಕಾರ್ಯದರ್ಶಿ (ವೈದ್ಯಕೀಯ ಶಿಕ್ಷಣ), ಇವರ ಆಪ್ತ ಸಹಾಯಕರಿಗೆ.
6) ಪ್ರಾಂಶುಪಾಲರು, ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ ಡಾ:ಬಿ.ಡಿ.ಜತ್ತಿ ಹೋಮಿಯೋಪತಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಡಿ.ಸಿ.ಕಾಂಪೌಂಡ, ಧಾರವಾಡ-1.
7) ಕಾರ್ಯದರ್ಶಿ, ಸೆಂಟ್ರಲ್ ಕೌನ್ಸಿಲ್ ಆಫ್ ಹೋಮಿಯೋಪತಿ, ಜವಹರಲಾಲ ನೆಹರು, ಭಾರತೀಯ ಕೇಂದ್ರೀಯ ಹೋಮಿಯೋಪತಿ ಅನುಸಂಧಾನ ಭವನ, ನಂ.61-65, 5ನೇ ಮತ್ತು 6ನೇ ಹಂತ, ಡಿ ಬ್ಲಾಕ ಎದುರು ಇನ್ಸಿಟ್ಯೂಷನಲ್ ಏರಿಯಾ, ಜಾನಕೀಪುರಿ, ನವದೆಹಲಿ-110058.
8) ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿಗಳು.

PRINCIPAL
Dakshin Bharat Hindi Prachar Sabha's
Dr. B.D. Jatti Homoeopathic
Medical College & Hospital
DHARWAD

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಡಾ॥ ಬಿ.ಡಿ. ಜತ್ತಿ ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯ, ಆಸ್ಪತ್ರೆ, ಮತ್ತು ರೀಸರ್ಚ್ ಸೆಂಟರ್, ಧಾರವಾಡ ಇವರಿಗೆ ಪ್ರಾಕ್ಟೀಸ್ ಆಫ್ ಮೆಡಿಸಿನ್ ತಜ್ಞತೆಯಲ್ಲಿ ಹೊಸದಾಗಿ ಸ್ನಾತಕೋತ್ತರ ಕೋರ್ಸ್‌ನ್ನು ಪ್ರಾರಂಭಿಸಲು ಹಾಗೂ ಹಾಲಿ ಇರುವ ಸ್ನಾತಕೋತ್ತರ ಕೋರ್ಸ್‌ನ ಸೀಟುಗಳನ್ನು ಹೆಚ್ಚಿಸಿಕೊಳ್ಳಲು ಅನುಮತಿ ನೀಡುವ ಬಗ್ಗೆ.

**ಓದಲಾಗಿದೆ:**
1. ಭಾರತ ಸರ್ಕಾರದ ಆಯುಷ್ ಇಲಾಖೆಯ ಪತ್ರ ಸಂಖ್ಯೆ:F.No.R-14014 / 06/2013-EP(H), ದಿನಾಂಕ:29.10.2014
2. ನಿರ್ದೇಶಕರು, ಆಯುಷ್ ನಿರ್ದೇಶನಾಲಯ, ಬೆಂಗಳೂರು ಇವರ ಪತ್ರಸಂಖ್ಯೆ:ಆಯುಷ್/93/ಅಭಿವೃದ್ಧಿ(1)/2014-15, ದಿ:11.11.2014.

****

**ಪ್ರಸ್ತಾವನೆ:**

ಮೇಲೆ ಕ್ರಮ ಸಂಖ್ಯೆ(1)ರಲ್ಲಿ ಓದಲಾದ ಭಾರತ ಸರ್ಕಾರದ ಆಯುಷ್ ಇಲಾಖೆಯ ಪತ್ರದಲ್ಲಿ, ಡಾ॥ ಬಿ.ಡಿ. ಜತ್ತಿ ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯ, ಆಸ್ಪತ್ರೆ, ಮತ್ತು ರೀಸರ್ಚ್ ಸೆಂಟರ್, ಧಾರವಾಡ ಇವರಿಗೆ 2014-15ನೇ ಶೈಕ್ಷಣಿಕ ಸಾಲಿನಿಂದ ಪ್ರಾಕ್ಟೀಸ್ ಆಫ್ ಮೆಡಿಸಿನ್ ತಜ್ಞತೆಯಲ್ಲಿ 03 ಸೀಟುಗಳ ಪ್ರವೇಶಮಿತಿಯೊಂದಿಗೆ ಹೊಸದಾಗಿ ಸ್ನಾತಕೋತ್ತರ ಕೋರ್ಸ್ ಪ್ರಾರಂಭಿಸಲು ಹಾಗೂ ಹಾಲಿ ಇರುವ ಆರ್ಗಾನಾನ್ ಆಫ್ ಮೆಡಿಸಿನ್ ತಜ್ಞತೆಯಲ್ಲಿನ ಸೀಟುಗಳನ್ನು 03 ರಿಂದ 06 ಸೀಟುಗಳಿಗೆ ಹೆಚ್ಚಿಸಿಕೊಳ್ಳಲು ಕೆಲವೊಂದು ಷರತ್ತುಗಳಿಗೊಳಪಟ್ಟು ಅನುಮತಿಯನ್ನು ನೀಡಲಾಗಿದೆ.

ಮೇಲೆ ಕ್ರಮ ಸಂಖ್ಯೆ(2)ರಲ್ಲಿ ಓದಲಾದ ಪತ್ರದಲ್ಲಿ ನಿರ್ದೇಶಕರು, ಆಯುಷ್ ನಿರ್ದೇಶನಾಲಯ, ಬೆಂಗಳೂರು ಇವರು ಡಾ॥ ಬಿ.ಡಿ. ಜತ್ತಿ ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯ, ಆಸ್ಪತ್ರೆ, ಮತ್ತು ರೀಸರ್ಚ್ ಸೆಂಟರ್, ಧಾರವಾಡ ಇವರಿಗೆ 2014-15ನೇ ಶೈಕ್ಷಣಿಕ ಸಾಲಿನಿಂದ ಪ್ರಾಕ್ಟೀಸ್ ಆಫ್ ಮೆಡಿಸಿನ್ ತಜ್ಞತೆಯಲ್ಲಿ 03 ಸೀಟುಗಳ ಪ್ರವೇಶಮಿತಿಯೊಂದಿಗೆ ಹೊಸದಾಗಿ ಸ್ನಾತಕೋತ್ತರ ಕೋರ್ಸ್‌ನ್ನು ಪ್ರಾರಂಭಿಸಲು ಹಾಗೂ ಹಾಲಿ ಇರುವ ಆರ್ಗಾನಾನ್ ಆಫ್ ಮೆಡಿಸಿನ್ ತಜ್ಞತೆಯಲ್ಲಿನ ಸೀಟುಗಳನ್ನು 03 ರಿಂದ 06 ಸೀಟುಗಳಿಗೆ ಹೆಚ್ಚಿಸಿಕೊಳ್ಳಲು ರಾಜ್ಯ ಸರ್ಕಾರವು ನೀಡಿರುವ ನಿರಾಕ್ಷೇಪಣಾ ಪತ್ರದ ಆಧಾರದ ಮೇಲೆ ಕೇಂದ್ರ ಸರ್ಕಾರವು ಕೆಲವೊಂದು ಷರತ್ತುಗಳಿಗೊಳಪಟ್ಟು ಅನುಮತಿ ನೀಡಿದೆ ಹಾಗೂ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಕೂಡ Consent of Affiliation ನೀಡಿದೆಯೆಂದು ತಿಳಿಸುತ್ತಾ, ಸದರಿ ಅನುಮತಿ ಪ್ರಮಾಣ ಪತ್ರಗಳ ಆಧಾರದ ಮೇಲೆ ಸರ್ಕಾರಿ ಆದೇಶ ಹೊರಡಿಸುವಂತೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು, ಈ ಕೆಳಕಂಡಂತೆ ಆದೇಶಿಸಿದೆ.

19/11/14

**ಸರ್ಕಾರದ ಆದೇಶ ಸಂಖ್ಯೆ:ಆಕುಕ 327 ಪಿಟಿಡಿ 2014, ಬೆಂಗಳೂರು, ದಿನಾಂಕ:18.11.2014**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಡಾ॥ ಬಿ.ಡಿ. ಜತ್ತಿ ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯ, ಆಸ್ಪತ್ರೆ, ಮತ್ತು ರೀಸರ್ಚ್ ಸೆಂಟರ್, ಧಾರವಾಡ ಇವರಿಗೆ 2014-15ನೇ ಶೈಕ್ಷಣಿಕ ಸಾಲಿನಿಂದ ಪ್ರಾಕ್ಟೀಸ್ ಆಫ್ ಮೆಡಿಸಿನ್ ತಜ್ಞತೆಯಲ್ಲಿ 03 ಸೀಟುಗಳ ಪ್ರವೇಶಮಿತಿಯೊಂದಿಗೆ ಹೊಸದಾಗಿ ಸ್ನಾತಕೋತ್ತರ ಕೋರ್ಸ್‌ನ್ನು ಪ್ರಾರಂಭಿಸಲು ಹಾಲಿ ಇರುವ ಆರ್ಗಾನಾನ್ ಆಫ್ ಮೆಡಿಸಿನ್ ತಜ್ಞತೆಯಲ್ಲಿನ ಸೀಟುಗಳನ್ನು 03 ರಿಂದ 06 ಸೀಟುಗಳಿಗೆ ಹೆಚ್ಚಿಸಿಕೊಳ್ಳಲು ಈ [illegible] ಷರತ್ತುಗಳಿಗೊಳಪಟ್ಟು ಆಡಳಿತಾತ್ಮಕ ಮಂಜೂರಾತಿ ನೀಡಿದೆ.

PRINCIPAL
Dakshin Bharat Hindi Prachar Sabha's
Dr. B.D. Jatti Homoeopathic
Medical College & Hospital
DHARWAD

1. ಸರ್ಕಾರಿ ಸೀಟುಗಳ ಹಂಚಿಕೆ ಮತ್ತು ಶುಲ್ಕಗಳ ಬಗ್ಗೆ ಹಾಲಿ ಜಾರಿಯಲ್ಲಿರುವ ಎಲ್ಲಾ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
2. ಸಂಯೋಜನೆಯ ಬಗ್ಗೆ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅನುಮತಿ ಪಡೆಯತಕ್ಕದ್ದು.
3. ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ವಿಧಿಸುವ ಷರತ್ತುಗಳನ್ನು ಪೂರೈಸತಕ್ಕದ್ದು.
4. ಸದರಿ ಕೋರ್ಸಿಗೆ ಸಂಬಂಧಿಸಿದಂತೆ ಕಾಲೇಜಿಗೆ ರಾಜ್ಯ ಸರ್ಕಾರದಿಂದ ಯಾವುದೇ ಅನುದಾನ ಹಾಗೂ ಸೌಲಭ್ಯ ನೀಡಲಾಗುವುದಿಲ್ಲ.
5. ಅನುಮೋದಿತ ಸ್ನಾತಕೋತ್ತರ ಕೋರ್ಸ್‌ಗಳ ಸೀಟುಗಳಲ್ಲಿ ಶೇಕಡ 25ರಷ್ಟು ಸೀಟುಗಳನ್ನು ಸರ್ಕಾರಕ್ಕೆ ಬಿಟ್ಟುಕೊಡತಕ್ಕದ್ದು.
6. ಶುಲ್ಕ ನಿಗದಿಗೆ ಸಂಬಂಧಿಸಿದಂತೆ ಸರ್ಕಾರವು ವಿಧಿಸಿರುವ/ವಿಧಿಸಬಹುದಾದ ಷರತ್ತುಗಳು/ನಿಯಮಗಳು ಈ ಕಾಲೇಜಿಗೂ ಅನ್ವಯಿಸುತ್ತವೆ.
7. ಕೇಂದ್ರ ಸರ್ಕಾರ/ರಾಜ್ಯ ಸರ್ಕಾರ ವಿಧಿಸಿರುವ ಹಾಗೂ ವಿಧಿಸಬಹುದಾದ ಎಲ್ಲಾ ಷರತ್ತುಗಳು ಈ ಕಾಲೇಜಿಗೂ ಅನ್ವಯಿಸುತ್ತವೆ.
8. ಮೇಲ್ಕಂಡ ಯಾವುದೇ ಷರತ್ತನ್ನು ಉಲ್ಲಂಘಿಸಿದಲ್ಲಿ ಸಂಲಗ್ನತೆ/ಮಂಜೂರಾತಿಯನ್ನು ಹಿಂತೆಗೆದುಕೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.

(ಬಿ. ಕಮಲಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ.
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾ.ವೈ. ಪದ್ಧತಿ ಮತ್ತು ಸಮನ್ವಯ)
(ದೂರವಾಣಿ ಸಂಖ್ಯೆ:22034304)

ಇವರಿಗೆ:

1. ಪ್ರಧಾನ ಮಹಾಲೇಖಪಾಲರು(ಎ & ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು- 560 001
2. ಕುಲಪತಿಗಳು/ರಿಜಿಸ್ಟ್ರಾರ್, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಜಯನಗರ, ಬೆಂಗಳೂರು.
3. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು.
4. ನಿರ್ದೇಶಕರು, ಆಯುಷ್ ನಿರ್ದೇಶನಾಲಯ, ಧನ್ವಂತರಿ ರಸ್ತೆ, ಬೆಂಗಳೂರು-9.
5. ಪ್ರಾಚಾರ್ಯರು, ಡಾ॥ ಬಿ.ಡಿ. ಜತ್ತಿ ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯ, ಆಸ್ಪತ್ರೆ, ಮತ್ತು ರೀಸರ್ಚ್ ಸೆಂಟರ್, ಡಿ.ಸಿ. ಕಾಂಪೌಂಡ್, ಧಾರವಾಡ-580001
6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿಯವರಿಗೆ.
7. ಸರ್ಕಾರದ ಉಪ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರಿಗೆ.
8. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

PRINCIPAL
Dakshin Bharat Hindi Prachar Sabha's
Dr. B.D. Jatti Homoeopathic
Medical College & Hospital
DHARWAD